ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.
ಸಿ.ಸಿ.ಸಂಖ್ಯೆ.4185/2024

ಫಿರ್ಯಾದುದಾರರುಃ- ಸರ್ಕಾರದ ಪರವಾಗಿ ಕಡೂರು ಪೊಲೀಸರು

ವಿರುದ್ಧ

ಆರೋಪಿತರುಃ- ಹನುಮಂತಪ್ಪ ಮತ್ತು ಇತರರು.

ದೋಷಾರೋಪಣೆ

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

1. ಹನುಮಂತಪ್ಪ ಟಿ. ಬಿನ್ ಲೇಟ್ ತಿಮ್ಮಯ್ಯ, ಸುಮಾರು 57 ವರ್ಷ, ವ್ಯವಸಾಯ, ವಾಸ ಃ ಸರಸ್ವತಿಪುರಂ, ಬೀರೂರು ಟೌನ್, ಕಡೂರು ತಾಲ್ಲೂಕು.
2. ಜಯಲಕ್ಷ್ಮಿ ಕೋಂ ಹನುಮಂತಪ್ಪ ಟಿ. ಸುಮಾರು 47 ವರ್ಷ, ವ್ಯವಸಾಯ, ವಾಸ ಃ ವಾಸ ಃ ಸರಸ್ವತಿಪುರಂ, ಬೀರೂರು ಟೌನ್, ಕಡೂರು ತಾಲ್ಲೂಕು.
3. ಅಂಜನಮೂರ್ತಿ ಬಿ.ಹೆಚ್. ಬಿನ್ ಹನುಮಂತಪ್ಪ ಟಿ. ಸುಮಾರು 28 ವರ್ಷ, ಮೊಬೈಲ್ ಅಂಗಡಿ ಕೆಲಸ, ವಾಸ ಃ ಸರಸ್ವತಿಪುರಂ, ಬೀರೂರು ಟೌನ್, ಕಡೂರು ತಾಲ್ಲೂಕು.
4. ಹೇಮಂತ್ ಬಿ.ಹೆಚ್. ಬಿನ್ ಹನುಮಂತಪ್ಪ ಟಿ. ಸುಮಾರು 24 ವರ್ಷ, ವ್ಯವಸಾಯ, ವಾಸ ಃ ಸರಸ್ವತಿಪುರಂ, ಬೀರೂರು ಟೌನ್, ಕಡೂರು ತಾಲ್ಲೂಕು.
5. ಪಾರ್ವತಮ್ಮ ಕೋಂ ಲೇಟ್ ಮಾರಪ್ಪ, ಸುಮಾರು 60 ವರ್ಷ, ವಾಸ ಃ ಬೆಳ್ಳಿಗುತ್ತಿ ಗ್ರಾಮ, ಕಡೂರು ತಾಲ್ಲೂಕು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆಃ

ಚಾಸಾ-1 ತಾರಾ ಪ್ರಶಾಂತ್ ಆರ್ ರವರಿಗೂ ಹಾಗೂ ಆರೋಪಿತರಾದ ನಿಮಗೂ ಬಗರ್ ಹುಕುಂ ಜಮೀನಿಗೆ ಸಂಬಂಧಿಸಿದಂತೆ ವ್ಯಾಜ್ಯವಿರುತ್ತದೆ. ಸದರಿ ಬಗರ್ ಹುಕುಂ ಜಮೀನನ್ನು 2000 ನೇ ಸಾಲಿನಲ್ಲಿ ಚಾಸಾ-1 ರವರು 1 ನೇ ಆರೋಪಿಯಾದ ನಿಮಗೆ ನೋಡಿಕೊಳ್ಳಲು ಬಿಟ್ಟಿದ್ದು, ನಂತರ 2020 ನೇ ಸಾಲಿನಲ್ಲಿ ಸದರಿ ಜಮೀನನ್ನು ಬಿಟ್ಟುಕೊಡುವಂತೆ ಕೇಳಿದಾಗ, 1 ರಿಂದ 4 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ಬೈದು ಬಿಟ್ಟುಕೊಡಲು

ನಿರಾಕರಿಸಿರುತ್ತೀರಿ. ಅಂತೆಯೇ ದಿನಾಂಕ: 07.07.2024 ರಂದು ಭಾನುವಾರ ಬೆಳಿಗ್ಗೆ 11.30 ಗಂಟೆ ಸಮಯದಲ್ಲಿ ಚಾಸಾ-1 ರವರು ಮೇಲ್ಕಂಡ ಜಮೀನಿಗೆ ತಂತಿ-ಕಂಬಗಳನ್ನು ಹಾಕಿಸುತ್ತಿರುವಾಗ, 2 ರಿಂದ 5 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಸದರಿ ಜಮೀನಿಗೆ ಅಕ್ರಮವಾಗಿ ಪ್ರವೇಶ ಮಾಡಿ ತಂತಿ-ಕಂಭ ಹಾಕುವುದನ್ನು ತಡೆದು ನಿಲ್ಲಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 329 (3) ಸಹಕಲಂ 3(5) ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಭಂಗವನ್ನುಂಟು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 352 ಸಹಕಲಂ 3(5) ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, 2 ನೇ ಆರೋಪಿಯಾದ ನೀವು ಚಾಸಾ-1 ರವರ ಕೊಳಪಟ್ಟಿ ಹಿಡಿದು ಎಳೆದಾಡಿದ್ದು, 1 ಮತ್ತು 3 ನೇಆರೋಪಿತರಾದ ನೀವು ಕೈಯ್ಯಿಂದ ಹೊಡೆದು ಸ್ವ ಇಚ್ಛೆಯಿಂದ ನೋವುಂಟು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 115(2) ಸಹಕಲಂ 3(5) ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, 1 ಮತ್ತು 3 ನೇ ಆರೋಪಿತರಾದ ನೀವು ಕೋಲಿನಿಂದ ಚಾಸಾ-1 ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 118(1)ರ ಸಹಕಲಂ 3(5) ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಐದನೆಯದಾಗಿ, ದಿನಾಂಕ: 10.07.2024 ರಂದು ರಾತ್ರಿ ಸಮಯದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಸದರಿ ಜಮೀನಿನಲ್ಲಿ ಹಾಕಿದ್ದ 10 ತಂತಿ-ಕಂಬಗಳನ್ನು ಮುರಿದು ಸುಮಾರು ರೂ.2500/- ರಷ್ಟು ಲುಕ್ಸಾನು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 324 (2) ಸಹಕಲಂ 3(5) ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಚಾಸಾ-1 ರವರೊಂದಿಗೆ ಜಗಳ ತೆಗೆದು, ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 351 (2) ಮತ್ತು (3) ಸಹಕಲಂ 3(5) ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನೀವು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಸದರಿ ಅಪರಾಧವನ್ನು ಮಾಡಿರುವುದರಿಂದ ಈ ಮೇಲಿನ ಆಪಾದನೆಯನ್ನು ಈ ನ್ಯಾಯಾಲಯದಲ್ಲಿ ಎದುರಿಸಬೇಕೆಂದು ನಾನು ನಿರ್ದೇಶಿಸುತ್ತಿದ್ದೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಆರೋಪಿ ಉತ್ತರ: ತಿಳಿಯಿತು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಆರೋಪಿ ಉತ್ತರ: ಯಾವುದೇ ತಪ್ಪು ಮಾಡಿರುವುದಿಲ್ಲ.

ವಿಚಾರಣೆಯಾಗಬೇಕು.

ದಿನಾಂಕ: **03** ನೇ ದಿವಸ ಏಪ್ರಿಲ್ ಮಾಹೆ **2025** ನೇ ಇಸವಿ.

-ಸಹಿ-

**(ಸವಿತರಾಣಿ ಹೆಚ್.ವಿ.,)**

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ.ಗಳು, ಕಡೂರು.